# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಸಿಡಿಸ್ ಆರ್.ಆರ್.ಟಿ.ಎಸ್.ಆರ್: 21/15-16

ದಿನಾಂಕ : 27-10-2016

ಉಪಸ್ಥಿತರು : ಡಾ:ರಾಜೇಂದ್ರ ಕೆ.ವಿ. ಐಎಎಸ್.,
ಉಪವಿಭಾಗಾಧಿಕಾರಿ
ಪುತ್ತೂರು ಉಪವಿಭಾಗ, ಪುತ್ತೂರು, ದ.ಕ.

---

ಮೇಲ್ಮನವಿದಾರರು

1. ಎಮ್.ಎನ್ ಪ್ರಭಾಕರ,
2. ಎಮ್.ಎನ್ ಶಿವರಾಮ ಮೂರ್ತಿ,
(1-2 ಎಮ್ ವಿ ನಾರಾಯಣರ ಮಕ್ಕಳು,
ಕುಂಞಿಮೂಲೆ ಮನೆ ,
ಐವರ್ನಾಡು ಗ್ರಾಮ, ಸುಳ್ಯ ತಾಲೂಕು ದ.ಕ.
(ನ್ಯಾಯವಾದಿ ಶ್ರೀ ಕೆ.ವೆಂಕಟ್ರಮಣ ಗೌಡ )

-ಮತ್ತು-

ಪ್ರತಿವಾದಿಯವರು

ಗೋಪಾಲ ಕೃಷ್ಣ ನಾಯಕ್,
ಬಿನ್.ಸಂಜೀವ ನಾಯಕ್ ,
ಸಂಪ್ಯ ಮನೆ,ಆರ್ಯಾಪು ಗ್ರಾಮ,
ಪುತ್ತೂರು ತಾಲೂಕು ದ.ಕ.
(ನ್ಯಾಯವಾದಿ ಶ್ರೀ ಸುಧಾಕರ ಎನ್.)

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ, ಸುಳ್ಯ ತಾಲೂಕು ಐವರ್ನಾಡು ಗ್ರಾಮದ MRH.10/2014-15 ದಿನಾಂಕ: 25-11-2014 ರ ತಹಶೀಲ್ದಾರರ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಸುಳ್ಯ ತಾಲೂಕು ಐವರ್ನಾಡು ಗ್ರಾಮದ ಸ.ನಂ. 217/1ಎ, 1ಬಿ, 2ಬಿ,2ಸಿ,3,4,5,6ಎ,6ಬಿ,280/1 ಮತ್ತು 280/2 ಗಳನ್ನು ರಂಗಪ್ಪಯ್ಯ ಎಂಬವರು ಅನುಭವಿಸಿಕೊಂ ಡುಯ ಬರುತ್ತಿದ್ದು, ಭೂನ್ಯಾಯ ಮಂಡಳಿ ಆದೇಶ LRYT. 1533/74-75 ರಂತೆ ಅವರಿಗೆ ಖಾಯಂ ಆಗಿರುವ ಸ್ಥಳಗಳಾಗಿರುತ್ತದೆ. ಮೇಲ್ಮನವಿದಾರರು ರಂಗಪ್ಪಯ್ಯ ನವರ ಸಹೋದರನ ಮಕ್ಕಳಾಗಿರುತ್ತಾರೆ. ರಂಗಪ್ಪಯ್ಯನವರು ನಿಸ್ಸಂತತಿಯಾಗಿರುತ್ತಾರೆ. ಮೇಲ್ಮನವಿದಾರರ ಪರವಾಗಿ ರಂಗಪ್ಪಯ್ಯ ಇವರು ದಿನಾಂಕ 7-11-1992 ರಂದು ವೀಲ್ಲುನಾಮೆ ಮಾಡಿರುತ್ತಾರೆ. ಹಾಗೂ ಕಲ್ಯಾಣಮ್ಮ ಇವರಿಗೆ ಜೀವಿತಾವಧಿಯವರೆಗೆ ಅನುಭವದ ಹಕ್ಕು ಇದ್ದಿತ್ತು.ಈ ವೀಲುನಾಮೆಯನ್ನು ಕಂದಾಯ ನಿರೀಕ್ಷಕರು ಪರಿಶೀಲಿಸಿ ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಿಸಲು ಆದೇಶಿಸಿರುತ್ತಾರೆ. ಈ ಆದೇಶದ ವಿರುದ್ಧ ಕಲ್ಯಾಣಮ್ಮನವರು ಮೇಲ್ಮನವಿ ಸಲ್ಲಿಸಿ ಮಾನ್ಯ ಸಹಾಯಕ ಕಮೀಷನರು ಈ ಮೇಲ್ಮನವಿಯನ್ನು ಮನ್ನಿಸಿರುತ್ತಾರೆ. ಈ ಆದೇಶವನ್ನು ಮೇಲ್ಮನವಿದಾರರು ಪ್ರಶ್ನಿಸಿ, ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಿಸಲು ಮಾನ್ಯ ಜಿಲ್ಲಾಧಿಕಾರಿಗಳು RAP 195/1999-2000 ರಂತೆ ಆದೇಶಿಸಿರುತ್ತಾರೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕಲ್ಯಾಣಮ್ಮನವರು ರಿಟ್ ಪಿಟಿಷನ್

ಸಲ್ಲಿಸಲಾಗಿ , ಸಿವಿಲ್ ನ್ಯಾಯಾಲಯದಲ್ಲಿ ಸೂಕ್ತ ಪರಿಹಾರಕ್ಕಾಗಿ ವ್ಯವಹರಿಸಲು ಸೂಚಿಸಿದೆ. ಅದರಂತೆ ಸಿವಿಲ್ ಜಡ್ಜ್ ಹಿರಿಯ ವಿಭಾಗ, ಸುಳ್ಯ ನ್ಯಾಯಾಲಯದಲ್ಲಿ ಒ.ಎಸ್. ನಂಬ್ರ 88/06 ರಂತೆ ವ್ಯವಹರಣೆಯಲ್ಲಿರುತ್ತದೆ.

ದಿನಾಂಕ: 9-10-2013 ರಂದು ಕಲ್ಯಾಣಮ್ಮನವರು ಒಂದು ವೀಲುನಾಮೆಯನ್ನು ಮಾಡಿರುವುದಾಗಿದ್ದರೂ ಇದು ಕಲ್ಯಾಣಮ್ಮನವರು ಮಾಡಿರುವ ವೀಲುನಾಮೆಯಲ್ಲ. ಇದು ಮೋಸದ ವೀಲುನಾಮೆ. ಈ ವೀಲುನಾಮೆಯಂತೆ ಪ್ರತಿವಾದಿಗಳ ಹೆಸರಿಗೆ MRH.10/2014-15 ದಿನಾಂಕ: 25-11-2014 ರ ಆದೇಶವನ್ನು ರದ್ದುಪಡಿಸಿ ರಂಗಪ್ಪಯ್ಯನವರು ಮಾಡಿರುವ ವೀಲುನಾಮೆಯಂತೆ ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಳಂಬ ವಿನಾಯತಿಗಾಗಿ KLR Act 1964 ರ ಕಲಂ 52 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 15-5-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ 17-6-2016 ರಂದು ವಿಚಾರಣೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುತ್ತಾರೆ. ಪ್ರತಿವಾದಿಯವರ ಪರ ನ್ಯಾಯವಾದಿಯವರು ತಮ್ಮ ಲಿಖಿತ ಆಕ್ಷೇಪಣೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿ ಮತ್ತು ಅದರಲ್ಲಿ ಹೇಳಲಾದ ಎಲ್ಲಾ ಅಂಶಗಳು ವಾಸ್ತವ ಹಾಗೂ ಕಾನೂನಿಗೆ ವಿರುದ್ಧವಾಗಿದ್ದು, ಸುಳ್ಳು ಸಾಧನೆಯಿಂದ ಕೂಡಿರುತ್ತದೆ. ಈ ಜಮೀನುಗಳು ರಂಗಪ್ಪಯ್ಯನವರ ಸ್ವಂತ ಆಸ್ತಿಗಳಾಗಿದ್ದು, ಮೇಲ್ಮನವಿದಾರರಿಗೆ ಯಾವುದೇ ಹಕ್ಕಿರುವುದಿಲ್ಲ. ರಂಗಪ್ಪಯ್ಯ ಯಾವುದೇ ವೀಲು ಬರೆದಿಲ್ಲ. ರಂಗಪ್ಪಯ್ಯ ಮೃತರಾದ ನಂತರ ಅವರ ಜಮೀನುಗಳಿಗೆ ಕಲ್ಯಾಣಮ್ಮ ಮಾತ್ರ ಹಕ್ಕುದಾರರು. ಮೇಲ್ಮನವಿದಾರರು ಕಲ್ಯಾಣಮ್ಮನವರ ವಿರುದ್ಧ ಸಲ್ಲಿಸಿರುವ ದಾವೆ O.S.88/06 ಇನ್ನೂ ತನಿಖೆಯಲ್ಲಿದೆ. ಹಾಗೂ ಮೇಲಿನ ಪ್ರತಿವಾದಿ ದಾವೆಯಲ್ಲಿ ಪ್ರತಿವಾದಿಯಾಗಿ ಮುಂದುವರೆಯುತ್ತಿದ್ದಾರೆ. ಕಲ್ಯಾಣಮ್ಮನವರು ದಿನಾಂಕ: 9-10-2013 ರಂದು ಪುತ್ತೂರು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿರುವ ನಂಬ್ರ 212/2013-14ರ ವೀಲುನಾಮೆಯಲ್ಲಿ ಅವರ ಮರಣಾನಂತರ ಈ ಪ್ರಕರಣದಲ್ಲಿ ಒಳಗೊಂಡ ಎಲ್ಲಾ ಆಸ್ತಿಗಳನ್ನು ಅವರ ತಂಗಿ ಮಗ ಮೇಲಿನ ಪ್ರತಿವಾದಿಗೆ ನೀಡಿರುತ್ತಾರೆ. ಅದರಂತೆ ಖಾತೆ ಬದಲಾವಣೆಯಾಗಿ ಪಹಣಿ ದಾಖಲಾಗಿರುತ್ತದೆ. ಪ್ರಕೃತ ಸಕ್ಷಮ ಅಧಿಕಾರ ಹೊಂದಿರುವ ವ್ಯಾವಹಾರಿಕ ನ್ಯಾಯಾಲಯದಲ್ಲಿರುವ ದಾವೆ O.S.88/06 ತನಿಖೆಯಲ್ಲಿರುತ್ತದೆ. ಅಲ್ಲಿವರೆಗೆ ಈಗಾಗಲೇ ಖಾತೆ ಬದಲಾವಣೆಯಾದ ಬಗ್ಗೆ ಆಕ್ಷೇಪಿಸುವುದು ಸರಿಯಲ್ಲ. ಆದುದರಿಂದ ಈ ಮೇಲ್ಮನವಿಯನ್ನು ವಜಾಗೊಳಿಸುವಂತೆ ಪ್ರತಿವಾದಿ ಕೋರಿರುತ್ತಾರೆ.

ಮೇಲ್ಮನವಿದಾರಳ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಪ್ರತಿವಾದಿಯವರ ಹೆಸರಲ್ಲಿ ಪಹಣಿ/ಖಾತೆ ದಾಖಲಿಸಿರುವುದು ದುರುದ್ದೇಶದ ಅಸಿಂಧುವಾದ ಆದೇಶವಾಗಿದೆ. ಆದುದರಿಂದ ಮನವಿಯಲ್ಲಿನ ದಾಖಲೆಗಳನ್ನು ಪುರಸ್ಕರಿಸಿ 25-11-2014 ರ ಕಂದಾಯ ನಿರೀಕ್ಷಕರ ಆದೇಶ ರದ್ದುಪಡಿಸಿ ಉಚ್ಚ ನ್ಯಾಯಾಲಯದ ಆದೇಶ ಪ್ರಕಾರ ಕಲ್ಯಾಣಿಯಮ್ಮ ಹಾಗೂ ಮೇಲ್ಮನವಿದಾರರಾದ ಎಂ.ಎನ್. ಪ್ರಭಾಕರ, ಎಂ.ಎನ್. ಶಿವರಾಯರ ಹೆಸರಲ್ಲಿ ಪಹಣಿ ಊರ್ಜಿತವಿರಿಸುವರೇ ಆದೇಶಿಸುವಂತೆ ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಸ ಸಂಖ್ಯೆ: W P No.41543/2001(KLR-RR/SUR) ದಿನಾಂಕ:28-12-2016 ದ.ಕ.ಜಿಲ್ಲಾಧಿಕಾರಿಯವರ ನ್ಯಾಯಾಲಯದ ನಂ:ಸಿಡಿಸ್ ಆರ್ ಎ ಪಿ.195/99-2000 ಮತ್ತು ಆರ್ ಎ ಪಿ :76/99-2000 ದಿನಾಂಕ:20-03-2001 ರ

ಆದೇಶವನ್ನು ರದ್ದುಗೊಳಿಸಿರುತ್ತದೆ. ಮತ್ತು ಪುತ್ತೂರು ಸಹಾಯಕ ಆಯುಕ್ತರ ನ್ಯಾಯಾಲದ ನಂ:ಸಿಡಿಸ್ ಆರ್ ಆರ್ ಟಿ .ಎಸ್ ಆರ್ :46/97-98 ದಿನಾಂಕ:12-07-1999 ರ ಆದೇಶವನ್ನು ಎತ್ತಿ ಹಿಡಿದಿರುತ್ತದೆ. ಅಲ್ಲದೆ ವೀಲುನಾಮೆಯ ಸಿಂಧುತ್ವವನ್ನು ಸಿವಿಲ್ ನ್ಯಾಯಾಲಯದಲ್ಲಿ ವ್ಯವಹರಿಸಿ ಆದೇಶವನ್ನು ಪಡೆಯುವಂತೆ ಆದೇಶವಾಗಿರುತ್ತದೆ. ಆದ್ದರಿಂದ ಪ್ರಕರಣದಲ್ಲಿ ಕಲ್ಯಾಣಿಯಮ್ಮ ಹೆಸರಲ್ಲಿ ಪಹಣಿ ಊರ್ಜಿತವಿರಿಸಬೇಕಿರುತ್ತದೆ. ಈ ಆದೇಶದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ರಿಟ್-ಅಪೀಲು ದಾಖಲಾಗಿರುವುದು ಕಂಡುಬರುವುದಿಲ್ಲ. ಆದ್ದರಿಂದ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದಂತೆ ಹಾಗೂ ಪುತ್ತೂರು ಸಹಾಯಕ ಆಯುಕ್ತರ ನ್ಯಾಯಾಲಯದ ಆದೇಶದಂತೆ ಪಹಣಿ ದಾಖಲೆಯನ್ನು ಶ್ರೀಮತಿ. ಕಲ್ಯಾಣಿ ಅಮ್ಮ ನವರ ಹೆಸರಲ್ಲಿ ಊರ್ಜಿತವಿಡುವುದು ಸೂಕ್ತವಾಗಿದೆ. ವಾದಿ ಪ್ರತಿವಾದಿಯವರು ತಮ್ಮಲ್ಲಿರುವ ವೀಲುನಾಮೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ರುಜುವಾತುಪಡಿಸಿ,ಸದ್ರಿ ಆದೇಶದೊಂದಿಗೆ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸುವುದು ಕಾನೂನು ಸಮ್ಮತವೆಂದು ಮನಗಂಡು ಪ್ರಕರಣದಲ್ಲಿ ಈ ಕೆಳಗಿನಂತೆ ಆದೇಶ ಮಾಡಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಸುಳ್ಯ ತಾಲೂಕು ಐವರ್ನಾಡು ಗ್ರಾಮದ ನಂ:ಎಂಆರ್ ಹೆಚ್:10/2014-15 ದಿನಾಂಕ:25-11-2014 ರ ಕಂದಾಯ ನಿರೀಕ್ಷಕರು ಸುಳ್ಯ ಇವರ ಮ್ಯುಟೇಶನ್ ಆದೇಶವನ್ನು ರದ್ದುಗೊಳಿಸಿದೆ.

ಐವರ್ನಾಡು ಗ್ರಾಮದ ಸ.ನಂ.217-1ಎ, 217-1ಬಿ, 217- 2ಬಿ1, 217-2ಸಿ, 217-3, 217-4, 217-5, 217-6ಎ, 217-6ಬಿ, 280-1 ಮತ್ತು 280-2 ರ ಜಮೀನುಗಳ ಖಾತೆ ಪಹಣಿಯನ್ನು ಕರ್ನಾಟಕ ಉಚ್ಛ ನ್ಯಾಯಾಲಯದ ಸಂಖ್ಯೆ: W P No.41543/2001(KLR-RR/SUR) ದಿನಾಂಕ:28-12-2003 ರಂತೆ ಆದೇಶದಂತೆ ಶ್ರೀಮತಿ.ಕಲ್ಯಾಣಿ ಅಮ್ಮ ಹೆಸರಲ್ಲಿ ದಾಖಲಿಸಲು ಸೂಕ್ತ ಕ್ರಮವನ್ನು ಜರಗಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ಉಕ್ತಲೇಖನ ಕೊಟ್ಟು ಗಣಕೀಕರಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 27-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ| ರಾಜೇಂದ್ರ ಕೆ.ವಿ., ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಕೆ.ವೆಂಕಟ್ರಮಣ ಗೌಡ,ಸುಳ್ಯ ತಾಲೂಕು ಇವರ ಮುಖಾಂತರ ಜ್ಯಾರಿ.
ಪ್ರತಿ: ಪ್ರತಿವಾದಿಯವರ ಪರ ನ್ಯಾಯವಾದಿ ಶ್ರೀ ಸುಧಾಕರ ಎನ್.ಸುಳ್ಯ ತಾಲೂಕು ಇವರ ಮುಖಾಂತರ ಜ್ಯಾರಿ.
ಪ್ರತಿ: ತಹಶೀಲ್ದಾರರು ಸುಳ್ಯ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.